ಟಿಪ್ಪಣಿಗಳು ಮತ್ತು ಆಜ್ಞೆಗಳು

(4) ಮುಂದುವರೆದು ಅನುಮೋದಿತ ಕ್ರೀಯಾ ಯೋಜನೆಯಲ್ಲಿರುವ ರಸ್ತೆಗಳ ದುರಸ್ಥಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ಮುಖ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಕಛೇರಿ ಆದೇಶ ಸಂಖ್ಯೆ ಮು.ಆ/ಪಿ.ಎಸ್.ಆರ್/87/2021 ದಿನಾಂಕ:01-07-2021 ರ ಆದೇಶದಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಜಾಬ್ ಕೋಡ್ ಸಂಖ್ಯೆ ನಿರೀಕ್ಷಿಸಿ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ್ ಆಹ್ವಾನಿಸಲು ಕ್ರಮ ವಹಿಸುವುದು ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮೊದಲು ಜಾಬ್ ಕೋಡ್ ಪಡೆಯಲು ಸೂಚಿಸಿರುತ್ತಾರೆ.

(5) ಅದರಂತೆ ಅಟ್ಟೂರು ವಾರ್ಡ್ ನಂ-03 ರಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಪ್ಯಾಕೆಜ್‌ವಾರು ವಿಂಗಡಣೆ ಮಾಡಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ.

ರೂ.10.00 ಕೋಟಿಗಳಿಗೆ ಪ್ಯಾಕೇಜ್ ತಯಾರಿಸಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ.

Sl no	GO Sl No	Package Name and Number	Name of work	Est cost Rs in Lakhs
1	236	Restoration and Improvements of Balance roads of Brundhavana layout, Balaji layout, BHEL1st phase and 2nd phase layout, Lakshmaiah reddy layout, Naidu layout, Jyothinagara 2nd and 3rd phase, Ramanna garden andsurrounding areas in ward no-03 of Yelahanka New townSub division PACKAGE NO-07.	Restoration and Improvements of Balance roads of Brundhavana layout, Balaji layout, BHEL 1st phase and 2nd phase layout and surrounding areas in ward no -03. of yelahanka Satellite town sub division	400.00
2	237		Restoration and Imiprovements of Balance roads of Lakshmaiah reddy layout, Naidu layout, Jyothinagara 2nd and 3rd phase road and surrounding areas in ward no -03. of yelahanka Satellite town sub division	400.00
3	263		Restoration and Improvements of Ramanna garden and surrounding areas in ward no -03. of yelahanka Satellite town sub dvision	200.00
			TOTAL	1000.00

(6) ಈ ಮೇಲ್ಕಂಡ ವಿವರಗಳಂತೆ ವಾರ್ಡ್-03ರ ಪ್ರದೇಶಗಳಲ್ಲಿರುವ ರಸ್ತೆಗಳನ್ನು ಸಮಗ್ರವಾಗಿ ಪುನಶ್ಚೇತನಗೊಳಿಸುವ ಕಾಮಗಾರಿಗಳನ್ನು ಕೈಗೊಳ್ಳಲು ರೂ.10.00 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ 2018-19ನೇ ಸಾಲಿನಲ್ಲಿ ಮಂಜೂರಾಗಿರುವ

ವಿಷಯ : ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ದರಪಟ್ಟಿಯಂತೆ ಹಾಗೂ ದಿನಾಂಕ 01-02-2021ರ ಪರಿಷ್ಕೃತ ದರಗಳಂತೆ ಹಾಗೂ ಅನುಮೋದಿತ ದರಗಳನ್ನು (ಡೆಟಾರೆಟ್) ಆಳವಡಿಸಿಕೊಂಡು ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.ಸದರಿ ಪ್ಯಾಕೇಜ್ ಕಾಮಗಾರಿಗೆ ಟೆಂಡರ್ ಆಹ್ವಾನಿಸಬೇಕಾಗಿರುವುದರಿಂದ ಘನ ಸರ್ಕಾರದ ವತಿಯಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ತಾಂತ್ರಿಕ ಮಂಜೂರಾತಿ ಹಾಗೂ ಡಿ.ಟಿ.ಎಸ್. ಅನುಮೋದನೆ ನೀಡಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

23/04/2021

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

(7) ಮುಖ್ಯ ಅಭಿಯಂತರರು (ಯ.ವ)

ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ, 2020-21ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಕಂಡಿಕೆ 205ರಲ್ಲಿ ಘೋಷಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರುವ 110ಹಳ್ಳಿಗಳ ರಸ್ತೆ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ:ನಅಇ-06ಎಂಎಸ್‌ವೈ-2021, ದಿನಾಂಕ:29-04-2021ರಲ್ಲಿ ಯಲಹಂಕ ವಿಧಾನ ಸಭಾಕ್ಷೇತ್ರಕ್ಕೆ ಒಟ್ಟು 16000.00ಲಕ್ಷಗಳ ಅನುದಾನ ಮಂಜೂರಾಗಿದ್ದು ಅದರಂತೆ ಸರ್ಕಾರದ ಆದೇಶದಲ್ಲಿನ ಪರತ್ತಿನಂತೆ ರೂ10.00ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್ ವಿಂಗಡಿಸಲು ಸೂಚಿಸಲಾಗಿದ್ದು, ಕಂಡಿಕೆ 06ರಲ್ಲಿ ವಿವರಿಸಿರುವಂತೆ Restoration and improvements of roads Balance roads of Brundhavana layout Balaji Layout BHEL 1st phase and 2nd phase layout lakshmaiah reddy, layout Naidu layout Jyothinagra 2nd and 3rd phase, Ramanna Garden and surrounding areas in ward no-03 of Yelahanka New Town sub division Package no-07 ಒಟ್ಟು03ಕಾಮಗಾರಿಯನ್ನು (GO no-236,237 &263) ಒಟ್ಟುಗೂಡಿಸಿ ರೂ.1000.00ಲಕ್ಷಗಳಿಗೆ ಪ್ಯಾಕೇಜ್ ಮಾಡಲಾಗಿದ್ದು, ಮಾನ್ಯ ಮುಖ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಆ/ಪಿ.ಆರ್/93/2021-22, ದಿನಾಂಕ:06-07-2021ರ ಆದೇಶದಲ್ಲಿ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡುವ ವ್ಯವಸ್ಥೆಯನ್ನು ಬಿಬಿಎಂಪಿ ಅನುದಾನಗಳಿಗೆ ಆಯಾ ವಲಯ ಮುಖ್ಯ ಅಭಿಯಂತರರ ಕಛೇರಿಯಲ್ಲಿ ಹಾಗೂ ಸರ್ಕಾರದ ಅನುದಾನಗಳಿಗೆ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ಅನುಮೋದಿತ ಕ್ರಿಯಾಯೋಜನೆಯಂತೆ ಕಾಮಗಾರಿಗಳಿಗೆ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿ ನಿರ್ವಹಣೆ ಪೂರ್ಣ ಛಾಯಾಚಿತ್ರಗಳೊಂದಿಗೆ ಅನ್ವಯವಾಗುವ ನಿರ್ವಹಣೆ ಕಾಮಗಾರಿಗಳಿಗೆ ರಸ್ತೆ ಇತಿಹಾಸ, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆಗಳನ್ನು ಪೂರೈಸಿ ಟೆಂಡರ್ ಅಂತಿಮಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮೊದಲು ಜಾಬ್ ಸಂಖ್ಯೆ ಪಡೆಯಲು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಗಿರುತ್ತದೆ.

(8) ಅದರಂತೆ ಕಾರ್ಯಪಾಲಕ ಅಭಿಯಂತರರು (ಯಲಹಂಕ) ವಿಭಾಗರವರು ಪ್ರಸ್ತಾಪಿತ ಕಾಮಗಾರಿಗೆ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಗಳನ್ನು ಅಳವಡಿಸಿಕೊಂಡು ಸ್ಥಳ ಅವಶ್ಯಕತೆಗೆ ಅನುಗುಣವಾಗಿ ರಸ್ತೆಗಳನ್ನು Restoration ಮಾಡಲು ಅಂದಾಜುಪಟ್ಟಿಯನ್ನು ತಯಾರಿಸಿ ತಾಂತ್ರಿಕ ಅನುಮೋದನೆ ಕೋರಿ ಕಡತ ಸಲ್ಲಿಸಿರುತ್ತಾರೆ.

(9) ಸದರಿ ಕಾಮಗಾರಿಯನ್ನು ಯಾವುದೇ ಲೆಕ್ಕಶೀರ್ಷಿಕೆ ಅಡಿಯಲ್ಲಿ ಕೈಗೊಂಡಿರದ ಬಗ್ಗೆ ಪರಿಶೀಲಿಸಿಕೊಂಡು Overlap ಆಗದಂತೆ ಹಾಗೂ ದಿನಾಂಕ:13-12-2019ರ ಮಾನ್ಯ ಆಯುಕ್ತರು ರವರ ಆದೇಶದನ್ವಯ ಅಂದಾಜು ಪಟ್ಟಿಯಲ್ಲಿ ಅಗತ್ಯ ಅಂಶಗಳನ್ನು ಅಳವಡಿಸಿಕೊಂಡು ಸೂಕ್ತ ಕ್ರಮವಹಿಸಿ, ಪ್ರಸ್ತಾಪಿತ ಕಾಮಗಾರಿಗಳನ್ನು ನಿಮಯಾನುಸಾರ ಅನುಷ್ಠಾನಗೊಳಿಸಲು ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರಿಗೆ ಸೂಚಿಸಲಾಗಿದ್ದು, ಮಾನ್ಯ ಆಯುಕ್ತರು ರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ ಬಿ12(1)ಪಿಆರ್/394/2020-21,ದಿನಾಂಕ:04-02-2021 ರಂತೆ ಸದರಿ ಅಂದಾಜುಪಟ್ಟಿಗೆ ಘನ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ತಾಂತ್ರಿಕ ಮಂಜೂರಾತಿ ಹಾಗೂ ಡಿಟಿಎಸ್ (10) ಅನುಮೋದನೆ ನೀಡಲು ಕೋರಿದ್ದು, ತಮ್ಮ ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ.

ಮುಖ್ಯ ಅಭಿಯಂತರರು
ಯಲಹಂಕ ವಲಯ

ಮಂಡಿಸಿದೆ.

ವಿಷಯ:- Restoration and Improvements of Balance roads of Brundhavana layout, Balaji layout, BHEL 1st phase and 2nd phase layout, Lakshmaiah reddy layout, Naidu layout, Jyothinagara 2nd and 3rd phase, Ramanna garden and surrounding areas in ward no -03 of Yelahanka New town Sub division PACKAGE NO-07. ಎಂಬ ಕಾಮಗಾರಿಯ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಿ ಆರ್ಥಿಕ ಬಿಡ್‌ಅನ್ನು ತೆರೆಯಲು ಅನುಮತಿ ನೀಡುವ ಬಗ್ಗೆ

ಉಲ್ಲೇಖ:

1. ಕಾಮಗಾರಿ ಟೆಂಡರ್ ಪ್ರಕಟಣೆ ಸಂಖ್ಯೆ: BBMP/EE/YNK.D/ E-PMT/ 08 /2021-22 dated: 30-08-2021.
2. ಸರ್ಕಾರದ ಆದೇಶ ಸಂಖ್ಯೆ : ನಅಇ 06 ಎಂ.ಎನ್.ವೈ 2021 ದಿನಾಂಕ: 29-04-2021.
3. ಮುಖ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಕಛೇರಿ ಆದೇಶ ಸಂಖ್ಯೆ: ಮು.ಆ/ ಪಿ.ಎಸ್.ಆರ್/ 87/2021-22 ದಿನಾಂಕ: 1-7-2021.

* * * * *

(11) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 110 ಹಳ್ಳಿಗಳ ರಸ್ತೆಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನೀರಿನ ಪೈಪ್‌ಲೈನ್ ಹಾಗೂ ಒಳಚರಂಡಿ ಆಳವಡಿಸಲು ರಸ್ತೆಗಳನ್ನು ಅಗೆದಿದ್ದು, ಅವುಗಳನ್ನು ಪುನಶ್ಚೇತನಗೊಳಿಸದ ಹಿನ್ನಲೆಯಲ್ಲಿ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದರಿಂದ 2020-21ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ 110 ಹಳ್ಳಿಗಳಲ್ಲಿ ಅಗೆದಿರುವ ರಸ್ತೆಗಳನ್ನು ಪುನಶ್ಚೇತನಗೊಳಿಸುವ ಸಲುವಾಗಿ ರೂ. 1000.00 ಕೋಟಿಗಳ ಅನುದಾನವನ್ನು ಮಿಸಲಿಡಿಸಲಾಗಿರುತ್ತದೆ. ಈ ಅನುದಾನದಡಿಯಲ್ಲಿ ಉಲ್ಲೇಖ ಪತ್ರ (2)ರ ಸರ್ಕಾರದ ಆದೇಶ ಸಂಖ್ಯೆ ನಅಇ 06 ಎಂ.ಎನ್.ವೈ 2021 ದಿನಾಂಕ: 29-04-2021. ರಲ್ಲಿ ವಿಧಾನ ಸಭಾ ಕ್ಷೇತ್ರವಾರು ಅನುದಾನವನ್ನು ಹಂಚಿಕೆ ಮಾಡಲಾಗಿದ್ದು, ಯಲಹಂಕ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಡುವ 110 ಹಳ್ಳಿಗಳ ಪ್ರದೇಶಗಳಾದ ಹಾರೋಹಳ್ಳಿ, ಕೆಂಚೇನಹಳ್ಳಿ, ನಾಗೇನಹಳ್ಳಿ, ಅನಂತಪುರ, ಚಿಕ್ಕಬೆಟ್ಟಹಳ್ಳಿ ಮತ್ತು ದೊಡ್ಡಬೆಟ್ಟಹಳ್ಳಿ ವ್ಯಾಪ್ತಿಗೆ ಒಳಪಡುವ ಬಡಾವಣೆಗಳಲ್ಲಿ ಬೆಂಗಳೂರು ಜಲ ಮಂಡಳಿಯವರು ಅಗೆದಿರುವ ರಸ್ತೆಗಳನ್ನು ಪುನಶ್ಚೇತನಗೊಳಿಸಲು ಒಟ್ಟು ರೂ. 160.00 ಕೋಟಿಗಳ ಅನುದಾನವನ್ನು ಮಂಜೂರು ಮಾಡಿದ್ದು, ಅದರಂತೆ ಕೈಗೊಳ್ಳುವ ಕಾಮಗಾರಿಗಳ ಕ್ರೀಯಾ ಯೋಜನೆಗೆ ಸರ್ಕಾರವು ಅನುಮೋದನೆ ನೀಡಿರುತ್ತದೆ.

(12) ಅದರಂತೆ ಅನುಮೋದನೆಗೊಂಡಿರುವ ಕ್ರೀಯಾ ಯೋಜನೆಯ ಕಾಮಗಾರಿಗಳನ್ನು ಸರ್ಕಾರದ ಆದೇಶದಲ್ಲಿನ ಷರತ್ತುಗಳಂತೆ ರೂ.10.00 ಕೋಟಿಗಳ ಕಡಿಮೆ ಇರದಂತೆ ಪ್ಯಾಕೆಜ್ ತಯಾರಿಸಿ ಟೆಂಡರ್ ಆಹ್ವಾನಿಸಲು ಸೂಚಿಸಿರುವ ಮೇರೆಗೆ ರೂ.10.00 ಕೋಟಿಗಳಿಗೆ ಪ್ಯಾಕೇಜ್ ತಯಾರಿಸಿ ಮುಖ್ಯ ಅಭಿಯಂತರರು ಯಲಹಂಕ ವಲಯರವರಿಂದ ಅನುಮೋದನೆ ಪಡೆಯಲಾಗಿರುತ್ತದೆ.

ಪಂಕ್ತಿಯ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು

(13)

ಉಲ್ಲೇಖ (3)ರಲ್ಲಿ ಮಾನ್ಯ ಮುಖ್ಯ ಆಯುಕ್ತರು ತಿಳಿಸಿರುವಂತೆ ಸರ್ಕಾರವು ಅನುಮೋದಿಸಿರುವ ಕ್ರೀಯಾ ಯೋಜನೆಯಲ್ಲಿನ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ಸಂಬಂಧಪಟ್ಟ / ಕಾರ್ಯಪಾಲಕ ಅಭಿಯಂತರರು ಜಾಬ್ ಕೋಡ್ ನಿರ್ಧಿಸಿ ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ್ ಆಹ್ವಾನಿಸಲು ಕ್ರಮ ವಹಿಸಲು ಹಾಗೂ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮೊದಲು ಜಾಬ್ ಕೊಡ್ ಸಂಖ್ಯೆ ಪಡೆಯಲು ಸೂಚಿಸಿರುತ್ತಾರೆ. ಅದರಂತೆ ಅನುಮೋದನೆಗೊಂಡಿರುವ ಕ್ರೀಯಾ ಯೋಜನೆಯಲ್ಲಿನ ಕಾಮಗಾರಿಗಳನ್ನು ಪ್ಯಾಕೇಜ್‌ವಾರು ತಯಾರಿಸಿದ್ದು, ವಿವರ ಈ ಕೆಳಕಂಡಂತಿದೆ.

Sl no	GO Sl No	Package Name and Number	Ward No	Name of work	Est cost Rs in Lakhs
1	236	Restoration and Improvements of Balance roads of Brundhavana layout, Balaji layout, BHEL 1st phase and 2nd phase layout, Lakshmaiah reddy layout, Naidu layout, Jyothinagara 2nd and 3rd phase, Ramanna garden and surrounding areas in ward no - 03 of Yelahanka New town Sub division PACKAGE NO-07	3	Restoration and Improvements of Balance roads of Brundhavana layout, Balaji layout, BHEL 1st phase and 2nd phase layout and surrounding areas in ward no - 03 of yelahanka Satellite town sub division	400 00
2	237		3	Restoration and Improvements of Balance roads of Lakshmaiah reddy layout, Naidu layout, Jyothinagara 2nd and 3rd phase road and surrounding areas in ward no - 03 of yelahanka Satellite town sub division	400 00
3	263		3	Restoration and Improvements of Ramanna garden and surrounding areas in ward no - 03 of yelahanka Satellite town sub division	200 00
				TOTAL	1000.00

(14)

ಈ ಮೇಲ್ಕಂಡ ಕಾಮಗಾರಿಗೆ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಗಳನ್ವಯ ಹಾಗೂ ದಿನಾಂಕ: 01-02-2021 ರ ಪರಿಷ್ಕೃತ ದರಗಳನ್ವಯ ರೂ.1000.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಇದನ್ನು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಮುಖ್ಯ ಅಭಿಯಂತರರು ಯಲಹಂಕ ವಲಯರವರು ಸಂಖ್ಯೆ ಬೃಚಿಂಮುಪಾ/ ಮು.ಅ/ಕಾ.ಮಂ/ಯ.ವ./ಪಿ.ಆರ್/ 32/2021-

22 ದಿನಾಂಕ 26-08-2021. ರಂತೆ ತಾಂತ್ರಿಕ ಮಂಜೂರಾತಿ ಮತ್ತು ಕರಡು ಟೆಂಡರ್ ಶೆಡ್ಯೂಲ್ - ಬಿ ಗೆ ಅನುಮೋದನೆ ಪಡೆಯಲಾಗಿರುತ್ತದೆ.

(15) ಈ ಮೇಲ್ಕಂಡ ಪ್ಯಾಕೇಜ್ ನಂ-7 ರ ಕಾಮಗಾರಿಗೆ ಸಂಬಂದಿಸಿದಂತೆ ಉಲ್ಲೇಖ (1) ರಂತೆ ದಿನಾಂಕ: 30-08-2021 ರಂದು KTPP.Act and KW-4 Standard Tender Document ಅನುಸಾರ E-Procurement ಮುಖಾಂತರ ಟೆಂಡರ್ ಕರೆದಿದ್ದು, ಸದರಿ ಟೆಂಡರ್ ಪ್ರಕಟಣೆಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳ ಮುಖಾಂತರ ಪ್ರಜಾವಾಣಿ ಮತ್ತು ಟೈಮ್ಸ್ ಆಪ್ ಇಂಡಿಯಾ ದಿನ ಪತ್ರಿಕೆಯಲ್ಲಿ ದಿನಾಂಕ: 01-09-2021 ರಂದು ಪ್ರಕಟಿಸಲಾಗಿರುತ್ತದೆ.

ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡತಿರುತ್ತದೆ.

ಕ್ರ.ಸಂ	ಅಂಶಗಳು	ವಿವರಗಳು
1	ಕೆಲಸದ ಹೆಸರು	Restoration and Improvements of Balance roads of Brundhavana layout, Balaji layout, BHEL 1st phase and 2nd phase layout, Lakshmaiah reddy layout, Naidu layout, Jyothinagara 2nd and 3rd phase, Ramanna garden and surrounding areas in ward no -03 of Yelahanka New town Sub division PACKAGE NO-07.
2	ಅಂದಾಜು ಮೊತ್ತ	ರೂ. 1000.00 ಲಕ್ಷಗಳು
3	ಇಂಡೆಂಟ್ ನಂ	BBMP/2021-22 / OW/ Work_ INDENT _48459
3	ಅನುದಾನದ ಯೋಜನೆ ಹೆಸರು, ಮತ್ತು ಸರ್ಕಾರದ ಆದೇಶದ ಸಂಖ್ಯೆ:	ಬಿ.ಬಿ.ಎಂ.ಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ತಿ ಮತ್ತು ಅಭಿವೃದ್ಧಿ ಯೋಜನೆ, ಸರ್ಕಾರದ ಆದೇಶ ಸಂಖ್ಯೆ ನಅಇ 06 ಎಂ.ಎಸ್.ಪೈ 2021 ದಿನಾಂಕ: 29-04-2021.
4	ಅನುಬಂಧದ ಕ್ರಮ ಸಂಖ್ಯೆ ಮತ್ತು ಕಾಮಗಾರಿಗಳ ಕ್ರಿಯಾ ಯೋಜನೆ ಕ್ರಮ ಸಂಖ್ಯೆ:	ಕ್ರ.ಸಂ 236, 237 ಮತ್ತು 263.
5	ಆಡಳಿತಾತ್ಮಕ ಅನುಮೋದನೆ	ಘನ ಸರ್ಕಾರದಿಂದ ನಿರೀಕ್ಷಿಸಿದೆ.
6	ತಾಂತ್ರಿಕ ಮಂಜೂರಾತಿ ಮೊತ್ತ	ರೂ.1000.00 ಲಕ್ಷಗಳು
7	ತಾಂತ್ರಿಕ ಮಂಜೂರಾತಿ ಸಂಖ್ಯೆ	ಸಂಖ್ಯೆ ಬ್ಯಬೆಂ.ಮ.ಪಾ/ ಮು.ಅ/ ತಾ.ಮಂ /ಯ.ವ./ಪಿ.ಆರ್/32/2021-22 ದಿನಾಂಕ 26-08-2021.
8	ಟೆಂಡರ್‌ಗೆ ಇಟ್ಟ ಮೊತ್ತ	ರೂ. 875.00 ಲಕ್ಷಗಳು
9	ಟೆಂಡರ್‌ನ ಪೂರ್ವ ಭಾವಿ ಸಭೆ	20-09-2021 ರಂದು ಸಂಜೆ 4.00 ಗಂಟೆಗೆ
10	ಅನ್ ಲೈನ್ ಇ-ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	30-09-2021 ರಂದು ಸಂಜೆ 4.00 ಗಂಟೆಗೆ
11	ಅನ್ ಲೈನ್ ಇ-ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ	01-10-2021 ರಂದು ಸಂಜೆ 4.00 ಗಂಟೆಗೆ

(16)

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

(17) ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ದಿನಾಂಕ: 01-10-2021 ರಂದು ಟೆಂಡರ್‌ಅನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ 5 ಜನ ಗುತ್ತಿಗೆದಾರರು ಭಾಗವಹಿಸಿದ್ದು, ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿರುತ್ತದೆ.

1. Sri B M Rangegowda (BMRG Projects India Pvt Ltd)
2. Sri G N Ramesh
3. Sri K Venkataraju
4. Sri Mohan kumar S R
5. Sri V Venkataraju

(18) ಮೇಲ್ಕಂಡ ಎಲ್ಲಾ ಬಿಡ್‌ದಾರರು ಸರ್ಕಾರದ ಅಧಿಸೂಚನೆಯ ಸಂಖ್ಯೆ FD/675/expe – 12/ 2020 dt 22-12-2020 ರ ಪ್ರಕಾರ ಇ.ಎಂ.ಡಿ ವಿನಾಯಿತಿ ಇರುವುದರಿಂದ ಇ.ಎಂ.ಡಿ ಡಿಕ್ಲೇರೆಷನ್ ಪ್ರತಿಯನ್ನು ಇ- ಪ್ರಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಿರುತ್ತಾರೆ. ಅದರಂತೆ ಸದರಿ ಬಿಡ್‌ದಾರರು ಸಲ್ಲಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ ಹಾಗೂ ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಣ ಪಡೆದು ತಾಂತ್ರಿಕ ಮೌಲ್ಯಮಾಪನ ನಡೆಸಿದ್ದು, ಅರ್ಹತೆ / ಅನರ್ಹತೆ ಹೊಂದಿರುವ ಬಿಡ್ದುದಾರರ ವಿವರ ಈ ಕೆಳಕಂಡಂತಿದೆ.

ಕ್ರಸಂ	ಗುತ್ತಿಗೆದಾರರ ಹೆಸರು	ವಿವರಣೆ	ಪರಾ
1	Sri B M Rangegowda (BMRG Projects India Pvt Ltd)	KW-4 Standard Tender Document ಅನುಸಾರ ನಿಗಧಿಪಡಿಸಿರುವಂತೆ Line of Credit ಪ್ರತಿಯನ್ನು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಿರುವುದಿಲ್ಲ.	Technically Dis-Qualified
2	Sri G N Ramesh	KW-4 Standard Tender Document ಅನುಸಾರ ನಿಗಧಿಪಡಿಸಿರುವಂತೆ Line of Credit ಪ್ರತಿಯನ್ನು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಿರುವುದಿಲ್ಲ.	Technically Dis-Qualified
3	Sri K Venkataraju	KW-4 Standard Tender Document ಅನುಸಾರ ನಿಗಧಿಪಡಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.	Technically Qualified
4	Sri Mohan kumar S R	KW-4 Standard Tender Document ಅನುಸಾರ ನಿಗಧಿಪಡಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.	Technically Qualified
5	Sri V Venkataraju	Annual Turn over ಹಾಗೂ Bid Capacity , KW-4 Standard Tender Document ಅನುಸಾರ ನಿಗಧಿಪಡಿಸಿರುವುದಕ್ಕಿಂತ ಕಡಿಮೆ ಇರುತ್ತದೆ.	Technically Dis-Qualified

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

(19) ಮೆಲ್ಕಂಡ ವಿವರಗಳಂತೆ ಕ್ರ.ಸಂ 1) Sri B M Rangegowda (BMRG Projects India Pvt Ltd) 2) Sri G N Ramesh 5) Sri V Venkataraju ರವರನ್ನು KW-4 Standard Tender Document ಅನುಸಾರ ಷರರತ್ತುಗಳನ್ನು ಪೂರೈಸದ ಕಾರಣ ಇವರನ್ನು ತಾಂತ್ರಿಕವಾಗಿ ಅನರ್ಹಗೊಳಿಸಲಾಗಿದೆ.

(20) ಮೇಲಿನ ವಿವರಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹತೆ ಹೊಂದಿರುವ ಬಿಡ್‌ದಾರರಾದ 1) Sri K Venkataraju 2) Sri Mohan kumar S R ರವರು KW-4 Standard Tender Document ಅನುಸಾರ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುವುದರಿಂದ ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ. (ತಾಂತ್ರಿಕ ಮೌಲ್ಯಮಾಪನದ ವಿವರಗಳು ಮತ್ತು ತುಲಾನಾತ್ಮಕ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಿದೆ.)

(21) ಆದುದರಿಂದ ತಾಂತ್ರಿಕವಾಗಿ ಅರ್ಹರಾಗಿರುವ ಬಿಡ್‌ಅನ್ನು ಅನುಮೋದಿಸಲು ಹಾಗೂ ಆರ್ಥಿಕ ಬಿಡ್‌ಅನ್ನು ತೆರೆಯಲು ಅನುಮೋದನೆಗಾಗಿ ಮಾನ್ಯ ಮುಖ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಟೆಂಡರ್ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ಮಂಡಿಸಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

16/10/2021

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

ಮುಖ್ಯ ಅಭಿಯಂತರರ ಕಛೇರಿ
18 OCT 2021
(22) 384
ಬಿ.ಬಿ.ಎಂ.ಪಿ,ಯಲಹಂಕ ವಲಯ.

ಮುಖ್ಯ ಅಭಿಯಂತರರು (ಯಲಹಂಕ ವಲಯ)

TA

ಕಂಡಿಕೆ (19)ರಿಂದ (21) ರವರೆಗೆ ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರು ಸಲ್ಲಿಸಿರುವ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ ದಿನಾಂಕ: 1-10-2021 ರಂದು ಟೆಂಡರ್ ಕರೆಯಲಾಗಿದ್ದು, 5 ಜನ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ. ಅದರಲ್ಲಿ 2 ಜನ ಬಿಡ್‌ದಾರರಾದ 1) Sri K Venkataraju 2) Sri Mohan kumar S R ರವರು ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹತೆ ಹೊಂದಿದ್ದು, ತಾಂತ್ರಿಕ ಬಿಡ್‌ಅನ್ನು ಅನುಮೋದಿಸಲು ಹಾಗೂ ಆರ್ಥಿಕ ಬಿಡ್‌ಅನ್ನು ತೆರೆಯಲು ಅನುಮೋದನೆಗಾಗಿ ಮಾನ್ಯ ಮುಖ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಟೆಂಡರ್ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ಮಂಡಿಸಲು ಕೋರಿರುವುದರಿಂದ ಕಡತವನ್ನು ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ.

ತಾಂತ್ರಿಕ ಸಹಾಯಕರು.

ಪಂಕ್ತಿಯ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು
(23)	ಮುಖ್ಯ ಅಭಿಯಂತರರು (ಯ.ವ) ಕಂಡಿಕೆ (11) ರಿಂದ (22) ರವರೆಗೆ ವಿವರಿಸಿರುವಂತೆ ಕಡತವನ್ನು ತಾಂತ್ರಿಕ ಮೌಲ್ಯಮಾಪನ ಸಮಿತಿ ಮುಂದೆ ಮಂಡಿಸಲು ಆದೇಶಕ್ಕಾಗಿ ಸಲ್ಲಿಸಿದೆ. ಮುಖ್ಯ ಅಭಿಯಂತರರು ಯಲಹಂಕ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
(24)	ವಲಯ ಆಯುಕ್ತರು (ಯ.ವ) ~~ಪಹಣಿಮಾಡಿ ಮಾನ~~ ಕಂಡಿಕೆಗಳನ್ನು ಅವಗಾಹಿಸಲು ಕೋರಿದೆ, 2020-21ನೇ ಸಾಲಿನ ಡಾಜ್ಯು ಆಯವ್ಯಯದಲ್ಲಿ ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರದಿಂದ ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ. ಸದರಿ ಕ್ರಿಯಾ ಯೋಜನೆಯಂತೆ "Restoration and Improvements of Balance roads of Brundhavana layout,Balaji layout,BHEL 1st phase and 1nd phase layout,Lkshmaiah Reddy layout, Naidu layout, Jyothinagara 3RD PHASE,Ramanna Garden 2nd and surrounding areas in ward no-03 of Yelahanka New Town Sub Division." (Package No-07) (Number of works-03)"ಒಟ್ಟು ರೂ.1000.00 ಲಕ್ಷಗಳ ಕಾಮಗಾರಿಗೆ ದಿನಾಂಕ: 30-08-2021ರಂದು ರಂದು ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ರವರು ಇ-ಪ್ರಕ್ಯೂರಮೆಂಟ್ ಮುಖಾಂತರ ಟೆಂಡರ್ ಕರೆದಿರುತ್ತಾರೆ. ಮಾನ್ಯ ಮುಖ್ಯ ಆಯುಕ್ತರು ರವರ ಕಛೇರಿ ಆದೇಶ ಸಂಖ್ಯೆ:ಮುಆ/ಬಿಎಸ್ಆರ್/87/2021-22 ದಿನಾಂಕ:01-07-2021 ರಂತೆ ಸರ್ಕಾರವು ಅನುಮೋದಿಸಿರುವ ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳನ್ನು ಪುರ್ಣಾಗಿ ಅನುಷ್ಠಾನಗೊಳಿಸಲು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಜಾಬ್ ಕೋಡ್ ಸಿರಿಕ್ಷಿಸಿ ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ್ ಆಹ್ವಾನಿಸಲು ಕ್ರಮವಹಿಸಲು ಹಾಗೂ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮೊದಲು ಜಾಬ್ ಕೋಡ್ ಸಂಖ್ಯೆ ಪಡೆಯಲು ಸೂಚಿಸಿ ಆದೇಶಿಸಿರುತ್ತಾರೆ. ಕಂಡಿಕೆ (11) ರಿಂದ (22)ರ ವರೆಗಿನ ಕಾರ್ಯಪಾಲಕ ಅಭಿಯಂತರರು(ಯಲಹಂಕ ವಿಭಾಗ) ಹಾಗೂ ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರ ವರದಿಯಲ್ಲಿ ಪ್ರಸ್ತಾಪಿತ ಕಾಮಗಾರಿಯ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 01-10-2021 ರಂದು ತೆರೆಯಲಾಗಿದ್ದು, ಕಂಡಿಕೆ(17) ರಿಂದ (20)ರಲ್ಲಿ ವಿವರಿಸಿರುವಂತೆ ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ 05 ಜನ ಗುತ್ತಿಗೆದಾರರರು ಭಾಗವಹಿಸಿದ್ದು, ಸದರಿ ತಾಂತ್ರಿಕ ಬಿಡ್‌ನಲ್ಲಿ 02 ಜನ ಗುತ್ತಿಗೆದಾರರರು ತಾಂತ್ರಿಕವಾಗಿ ಅರ್ಹತೆ ಹೊಂದಿರುತ್ತಾರೆ. ಕಾರ್ಯಪಾಲಕ ಅಭಿಯಂತರರು(ಯಲಹಂಕ ವಿಭಾಗ) ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಒಟ್ಟು ಅಂದಾಜು ಪಟ್ಟಿಯ ಮೊತ್ತ ರೂ.875.00 ಲಕ್ಷಗಳಿಗೆ ಟೆಂಡರ್ ಆಹ್ವಾನಿಸಿದ್ದು, ತಾಂತ್ರಿಕವಾಗಿ ಅರ್ಹರಾಗಿರುವ ಬಿಡ್‌ಅನ್ನು ಅನುಮೋದಿಸಲು ಹಾಗೂ ಆರ್ಥಿಕ ಬಿಡ್‌ಅನ್ನು ತೆರೆಯಲು ಮಾನ್ಯ ಮುಖ್ಯ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ 'ತಾಂತ್ರಿಕ/ಆರ್ಥಿಕ ಮೌಲ್ಯಮಾಪನ ಮತ್ತು ದರನಿಗದಿಗೆ ಸಮಿತಿ'ಯ ಮುಂದೆ ಮಂಡಿಸಲು ಪ್ರಸ್ತಾವನೆಯೊಂದಿಗೆ ಕಡತವನ್ನು ಸಲ್ಲಿಸಿರುತ್ತಾರೆ.

ವಿಷಯ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಕಂಡಿಕೆ(22) ಮತ್ತು (23)ರಲ್ಲಿನ ಮುಖ್ಯ ಅಭಿಯಂತರರು(ಯಲಹಂಕ)ವಲಯ ರವರ ಶಿಫಾರಸ್ಸಿನಂತೆ, ಸದರಿ ಕಾಮಗಾರಿಗೆ ತಾಂತ್ರಿಕ ಬಿಡ್ ಅನುಮೋದನೆಗಾಗಿ ಹಾಗೂ ಆರ್ಥಿಕ ಬಿಡ್‌ಅನ್ನು ತೆರೆಯಲು ಮತ್ತು ಸೂಕ್ತ ತೀರ್ಮಾನಕ್ಕಾಗಿ "ತಾಂತ್ರಿಕ/ಆರ್ಥಿಕ ಮೌಲ್ಯಮಾಪನ ಮತ್ತು ದರಸಂಧಾನ ಸಮಿತಿ"ಯ ಮುಂದೆ ಮಂಡಿಸಲು ತಮ್ಮ ಆದೇಶ ಕೋರಿ ಕಡತ ಸಲ್ಲಿಸಿದೆ.

ವಿಶೇಷ ಆಯುಕ್ತರು (ಆಡಳಿತ) ಹಾಗೂ
ವಲಯ ಆಯುಕ್ತರು (ಯಲಹಂಕ)

25) ಮಾನ್ಯ ಮುಖ್ಯ ಆಯುಕ್ತರು)

21.10.2021

ಮುಖ್ಯ ಆಡಳಿತಾಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

26) CE (Yelahanka) A.E. (W.W)

ಪುಟ ಸಂಖ್ಯೆ

ಪಂಕ್ತಿಯ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ:-

ವಿಷಯ:- Restoration and Improvements of Balance roads of Brundhavana layout, Balaji layout, BHEL 1st phase and 2nd phase layout, Lakshmaiah reddy layout, Naidu layout, Jyothinagara 2nd and 3rd phase, Ramanna garden and surrounding areas in ward no -03 of Yelahanka New town Sub division PACKAGE NO-07 . ಎಂಬ ಕಾಮಗಾರಿಯ ಆರ್ಥಿಕ ಮೌಲ್ಯ ಮಾಪನದ ಬಗ್ಗೆ

* * * *

(27) ಯಲಹಂಕ ವಿಭಾಗದ ವ್ಯಾಪ್ತಿಯ ವಾರ್ಡ್ ಸಂಖ್ಯೆ: 02 & 03 ರಲ್ಲಿ 2020-21ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ 110 ಹಳ್ಳಿಗಳಲ್ಲಿ ಆಗೆದಿರುವ ರಸ್ತೆಗಳನ್ನು ಪುನರ್ಜೀವನಗೊಳಿಸುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ : ನಅಇ 06 ಎಂ.ಎಸ್.ಪೈ 2021 ಬೆಂಗಳೂರು ದಿನಾಂಕ: 29-04-2021 ರಲ್ಲಿ ವಿಧಾನ ಸಭಾ ಕ್ಷೇತ್ರವಾರು ಅನುದಾನವನ್ನು ಪಂಚಿಕೆ ಮಾಡಲಾಗಿದ್ದು, ಯಲಹಂಕ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಡುವ 110 ಹಳ್ಳಿಗಳ ಪ್ರದೇಶಗಳಾದ ಪಾರೋಹಳ್ಳಿ, ಕೆಂಚೇನಹಳ್ಳಿ, ನಾಗೇನಹಳ್ಳಿ, ಅನಂತಪುರ, ಚಿಕ್ಕಬೆಟ್ಟಹಳ್ಳಿ ಮತ್ತು ದೊಡ್ಡಬೆಟ್ಟಹಳ್ಳಿ ವ್ಯಾಪ್ತಿಗೆ ಒಳಪಡುವ ಬಡಾವಣೆಗಳಲ್ಲಿ ಬೆಂಗಳೂರು ಜಲ ಮಂಡಳಿಯವರು ಆಗೆದಿರುವ ರಸ್ತೆಗಳನ್ನು ಪುನರ್ಜೀವನಗೊಳಿಸಲು ಒಟ್ಟು ರೂ. 160.00 ಕೋಟಿಗಳ ಅನುದಾನವನ್ನು ಮಂಜೂರು ಮಾಡಿದ್ದು, ಸದರಿ ಅನುದಾನದಡಿ ವಾರ್ಡ್ ಸಂ-03ರಲ್ಲಿ ಕೈಗೊಂಡಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ತಯಾರಿಸಿರುವ ಪ್ಯಾಕೇಜ್ ನಂ 07 ರ ಒಟ್ಟು ಅಂದಾಜು ಮೊತ್ತ ರೂ. 1000.00 ಲಕ್ಷಗಳಿಗೆ ದಿನಾಂಕ: 30-08-2021 ರಂದು ಡ್ಡಿ-ಟೆಂಡರ್ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿರುತ್ತದೆ.

(28) ಸದರಿ ಟೆಂಡರ್‌ನಲ್ಲಿ ಐದು ಜನ ಬಿಡ್‌ದಾರರು ಭಾಗವಹಿಸಿದ್ದು, 1) Sri B M Rangegowda (BMRG Projects India Pvt Ltd) 2) Sri G N Ramesh 3) Sri V Venkataraju ರವರನ್ನು KW-4 Standard Tender Document ಅನುಸಾರ ಷರತ್ತುಗಳನ್ನು ಪೂರೈಸದ ಕಾರಣ ಇವರನ್ನು ತಾಂತ್ರಿಕವಾಗಿ ಅನರ್ಹಗೊಳಿಸಲಾಗಿದೆ. ಹಾಗೂ ಗುತ್ತಿಗೆದಾರರಾದ 1) Sri K Venkataraju 2) Sri Mohan kumar S R ರವರು ಟೆಂಡರ್‌ನಲ್ಲಿ ನಿಗಧಿಪಡಿಸಿದ ಷರತ್ತುಗಳಂತೆ ಅರ್ಹ ದಾಖಲಾತಿಗಳನ್ನು ಸಲ್ಲಿಸಿ ಅರ್ಹರಾಗಿರುತ್ತಾರೆ.

(29) ಮೇಲ್ಕಾಣಿಸಿದ ಐದು ಜನರಲ್ಲಿ ಉಳಿದ ಇಬ್ಬರೂ ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ ಸದರಿಯವರ ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ ಆರ್ಥಿಕ ಬಿಡ್ ತೆರೆಯಲು ಅನುಮೋದನೆ ಕೋರಿ ಟೆಂಡರ್ ಮೌಲ್ಯ ಮಾಪನ ಸಮಿತಿ ಮುಂದೆ ಮಂಡಿಸಲಾಗಿದ್ದು, ದಿನಾಂಕ 21-10-2021 ರಂದು ಮಾನ್ಯ ಮುಖ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಅಧ್ಯಕ್ಷತೆಯಲ್ಲಿ ನಡೆದ ಟೆಂಡರ್ ಮೌಲ್ಯ ಮಾಪನ ಸಮಿತಿಯಲ್ಲಿ ತಾಂತ್ರಿಕವಾಗಿ ಅರ್ಹರಾಗಿರುವ **1) Sri K Venkataraju 2) Sri Mohan kumar S R** ರವರುಗಳ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಿ ಆರ್ಥಿಕ ಬಿಡ್‌ಅನ್ನು ತೆರೆಯಲು ಸಮಿತಿಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ ತಾಂತ್ರಿಕವಾಗಿ ಅರ್ಹರಾಗಿರುವ ಇಬ್ಬರೂ ಬಿಡ್ಡುದಾರರ ಆರ್ಥಿಕ ಬಿಡ್‌ಅನ್ನು ದಿನಾಂಕ 27-10-2021ರಂದು ತೆರೆಯಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ.

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟಿ ಮೊತ್ತ 2018-19 ರ ಅನುಮೋದಿತ ದರಗಳಿಗೆ ಹೊಲಿಸಿದಾಗ.	ಗುತ್ತಿಗೆದಾರರು ನಮೂದಿಸಿರುವ ದರಗಳು	2018-19ನೇ ಸಾಲಿನ ಎಸ್.ಆರ್.ದರಗಳಿಗೆ ಹೋಲಿಸಿದಾಗ ಶೇಕಡವಾರು	ಪರಾ
01	Sri Mohan kumar S R	8,75,00,587.11	9,18,58,116.30	(+) 4.98%	ಎಲ್-1
02	Sri K Venkataraju		9,46,31,251.93	(+) 8.15%	ಎಲ್-2

(30) ಮೇಲ್ಕಂಡ ಇಬ್ಬರೂ ಗುತ್ತಿಗೆದಾರರು ಸಲ್ಲಿಸಿರುವ ಆರ್ಥಿಕ ಬಿಡ್‌ಅನ್ನು ಪರಿಶೀಲಿಸಲಾಗಿ **Sri Mohan kumar S R** ರವರು ನಮೂದಿಸಿರುವ ರೂ. **9,18,58,116.30** ಗಳು ಅತಿ ಕಡಿಮೆ ದರಗಳಾಗಿರುತ್ತದೆ.

(31) ಆದುದರಿಂದ ಗುತ್ತಿಗೆದಾರರಾದ **Sri Mohan kumar S R** ರವರು ನಮೂದಿಸಿರುವ ರೂ. **9,18,58,116.30** ಗಳು ಅತಿ ಕಡಿಮೆ ದರಗಳಾಗಿದ್ದು, ಅನುಮೋದಿತ ಅಂದಾಜು ಪಟ್ಟಿಯ 2018-19 ಸಾಲಿನ ದರಗಳಿಗೆ ತುಲನೆ ಮಾಡಿದಾಗ ಶೇಕಡ (+)4.98% ರಷ್ಟು ಹೆಚ್ಚು ದರಗಳನ್ನು ನಮೂದಿಸಿ ಅರ್ಹ ಗುತ್ತಿಗೆದಾರರಾಗಿರುತ್ತಾರೆ. ಅದರಂತೆ ಸದರಿ ಗುತ್ತಿಗೆದಾರರು ಸಲ್ಲಿಸಿರುವ ದರಗಳಿಗೆ ಅನುಮೋದನೆ ಕೋರಿ ಆರ್ಥಿಕ ಮೌಲ್ಯಮಾಪನ ಸಮಿತಿ ಮುಂದೆ ಮಂಡಿಸಲು ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

28/10/2021
ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

(32) ಮುಖ್ಯ ಅಭಿಯಂತರರು (ಯಲಹಂಕ ವಲಯ)

ಗುತ್ತಿಗೆಕಾಮಗಾರಿಗೆ ಸಕ್ಷಮ ಪ್ರಾಧಿಕಾರಿಗಳಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲಾಗಿದೆ.

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

(33)

ಕಾರ್ಯಾಪಾಲಕ ಅಭಿಯಂತರರು (ಯಲಹಂಕ ವಿಭಾಗ)

ಕಂಡಿಕೆ (32) ರಲ್ಲಿ ಮುಖ್ಯ ಅಭಿಯಂತರರು ಯಲಹಂಕ ವಲಯರವರು ಎಲ್-1 ಗುತ್ತಿಗೆದಾರರೊಂದಿಗೆ ದರ ಸಂದಾನ ನಡೆಸಲು ಸೂಚಿಸಿರುವ ಮೇರೆಗೆ ದಿನಾಂಕ: 28-10-2021 ರಂದು ಗುತ್ತಿಗೆದಾರರಿಗೆ ತಿಳುವಳಿಕೆ ಪತ್ರವನ್ನು ನೀಡಲಾಗಿರುತ್ತದೆ. ಅದರಂತೆ ಗುತ್ತಿಗೆದಾರರು ದಿನಾಂಕ: 30-10-2021 ರಂದು ಈ ಕಛೇರಿಗೆ ಪತ್ರ ನೀಡಿ 2018-19 ನೇ ಸಾಲಿನ ಟೋಕೋಪಯೋಗಿ ಇಲಾಖೆಯ ಅನುಮೋದಿತ ದರಗಳ ಮೊತ್ತಕ್ಕೆ ಶೇಕಡ (+) 4.90% ರಷ್ಟು ಹೆಚ್ಚಿನ ದರಗಳಿಗೆ ಕಾಮಗಾರಿ ನಿರ್ವಹಿಸಲು ಒಪ್ಪಿರುತ್ತಾರೆ. ವಿವರ ಈ ಕೆಳಕಂಡಂತಿರುತ್ತದೆ.

Sl No	Before Negotiation		After Negotiation	
01	ಗುತ್ತಿಗೆದಾರರು ನಮೂದಿಸಿರುವ ದರಗಳು	2018-19ನೇ ಸಾಲಿನ ಎಸ್.ಆರ್.ಧರಗಳಿಗೆ ಹೋಲಿಸಿದಾಗ ಶೇಕಡ ವಾರು	ದರ ಸಂದಾನದ ನಂತರ ಗುತ್ತಿಗೆದಾರರು ನಮೂದಿಸಿರುವ ದರಗಳು	2018-19ನೇ ಸಾಲಿನ ಎಸ್.ಆರ್.ಧರಗಳಿಗೆ ಹೋಲಿಸಿದಾಗ ಶೇಕಡ ವಾರು
	9,18,58,116.30	(+) 4.98%	9,17,88,115.88	(+) 4.90%

(34)

ಈ ಮೇಲ್ಕಂಡ ವಿವರಗಳಂತೆ ದರ ಸಂದಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. **9,17,88,115.88** ಗಳಾಗಿದ್ದು, 2018-19ನೇ ಸಾಲಿನ ದರಗಳಿಗೆ ತುಲನೆ ಮಾಡಿದಾಗ ಶೇಕಡ **4.90%** ರಷ್ಟು ಹೆಚ್ಚಾಗಿರುತ್ತದೆ. ಆದುದರಿಂದ ಸದರಿಯವರು ನಮೂದಿಸಿರುವ ಮೊತ್ತ ರೂ **9,17,88,115.88** ಗಳಿಗೆ ಅನುಮೋದನೆ ಕೋರಿ ಆರ್ಥಿಕ ಮೌಲ್ಯಮಾಪನ ಸಮಿತಿ ಮುಂದೆ ಮಂಡಿಸಲು ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

30/10/2021

ಕಾರ್ಯಾಪಾಲಕ ಅಭಿಯಂತರರು
ಯಲಹಂಕ ವಿಭಾಗ

(35) 496 31 2021

ಮುಖ್ಯ ಅಭಿಯಂತರರು (ಯಲಹಂಕ ವಲಯ)

ಕಂಡಿಕೆ (34) ರಲ್ಲಿ ಕಾರ್ಯಾಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ ದಿನಾಂಕ: 21-10-2021ರಂದು ಮಾನ್ಯ ಮುಖ್ಯ ಅಯುಕ್ತರು ಬಿ.ಬಿ.ಎಂ.ಪಿ ರವರ ಅಧ್ಯಕ್ಷತೆಯಲ್ಲಿ ನಡೆದ ತಾಂತ್ರಿಕ ಮೌಲ್ಯ ಮಾಪನ ಸಮಿತಿ ಸಭೆಯಲ್ಲಿ ತಾಂತ್ರಿಕವಾಗಿ ಅರ್ಹರಾಗಿರುವ **1) Sri K Venkataraju 2) Sri Mohan kumar S R** ರವರುಗಳ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಿ ಆರ್ಥಿಕ ಬಿಡ್‌ಅನ್ನು ತೆರೆಯಲು ಸಮಿತಿಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(36)	ಅದರಂತೆ ಅರ್ಹರಾಗಿರುವ ಇಬ್ಬರೂ ಬಿಡ್‌ದಾರರಾದ 1) Sri K Venkataraju 2) Sri Mohan kumar S R ರವರು ಸಲ್ಲಿಸಿರುವ ಅರ್ಥಿಕ ಬಿಡ್‌ಅನ್ನು ಪರಿಶೀಲಿಸಲಾಗಿ ಗುತ್ತಿಗೆದಾರರಾದ **Sri Mohan kumar S R** ರವರು ನಮೂದಿಸಿರುವ **ರೂ. 9,18,58,116.30** ಗಳು ಅತಿ ಕಡಿಮೆ ದರಗಳಾಗಿರುತ್ತದೆ.
(37)	ಆದುದರಿಂದ ಗುತ್ತಿಗೆದಾರರಾದ **Sri Mohan kumar S R** ರವರು ನಮೂದಿಸಿರುವ **ರೂ. 9,18,58,116.30** ಗಳು ಅತಿ ಕಡಿಮೆದರಗಳಾಗಿದ್ದು, ಅನುಮೋದಿತ ಅಂದಾಜು ಪಟ್ಟಿ 2018-19ನೇ ಸಾಲಿನ ದರಗಳಿಗೆ ತುಲನೆ ಮಾಡಿದಾಗ **ಶೇಕಡ 4.98%** ರಷ್ಟು ಹೆಚ್ಚಾಗಿರುತ್ತದೆ. ತದನಂತರ ಗುತ್ತಿಗೆದಾರರೊಂದಿಗೆ ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರು ದರ ಸಂದಾನ ನಡೆಸಿದ್ದು, ದರ ಸಂದಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ **ರೂ. 9,17,88,115.88** ಗಳಾಗಿದ್ದು, 2018-19ನೇ ಸಾಲಿನ ದರಗಳಿಗೆ ತುಲನೆ ಮಾಡಿದಾಗ **ಶೇಕಡ 4.90%** ರಷ್ಟು ಹೆಚ್ಚಾಗಿರುತ್ತದೆ. ಆದುದರಿಂದ ಸದರಿಯವರು ನಮೂದಿಸಿರುವ ಮೊತ್ತ **ರೂ. 9,17,88,115.88** ಗಳನ್ನು ಅನುಮೋದಿಸಲು ಕೊರಿರುವುದರಿಂದ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ. ತಾಂತ್ರಿಕ ಸಹಾಯಕರು
(38)	ಮುಖ್ಯ ಅಭಿಯಂತರರು (ಯ.ವ)
	ಕಂಡಿಕ ರಿಂದ ರವರಿಗೆ ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯಂತೆ ಯಲಹಂಕ ವಿಧಾನ ಸಭಾಕ್ಷೇತ್ರಕ್ಕೆ ಒಳಪಡುವ 110ಹಳ್ಳಿಗಳ ಪ್ರದೇಶಗಳಲ್ಲಿ ಬೆಂಗಳೂರು ಜಲಮಂಡಳಿ ವತಿಯಿಂದ ಅಗೆದಿರುವ ರಸ್ತೆಗಳನ್ನು ಪುನರ್ಚೇತನಗೊಳಿಸಲು ಘನ ಸರ್ಕಾರದಿಂದ ರೂ.1600.00ಕೋಟಿಗಳ ಅನುದಾನ ಮಂಜೂರಾಗಿದ್ದು ಸದರಿ ಅನುದಾನದಲ್ಲಿ ಪ್ಯಾಕೇಜ್‌ವಾರು ಟೆಂಡರ್ ಕರೆಯಲಾಗಿದ್ದು ಪ್ರಸ್ತಾಪಿತ ಕಾಮಗಾರಿಗೆ ದಿನಾಂಕ:21-10-2021ರಂದು ಮಾನ್ಯ ಮುಖ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರಸಂದಾನ ಸಮಿತಿಯಲ್ಲಿ ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆ ದೊರೆತಿದ್ದು ಅದರಂತೆ ದಿನಾಂಕ:27-10-2021ರಂದು ಅರ್ಹ ಬಿಡ್‌ದಾರರ ಆರ್ಥಿಕ ಬಿಡ್ ತೆರೆಯಲಾಗಿದ್ದು, ಅತೀ ಕಡಿಮೆ ದರ ನಮೂದಿಸಿರುವ Sri.Mohan Kumar.S.Rರವರು ನಮೂದಿಸಿರುವ ರೂ.9,18,58,116.30ಗಳು 2018-19ನೇ ಸಾಲಿನ ದರಗಳಿಗೆ ಹೋಲಿಸಿದಾಗ ಶೇಕಡ(+)4.98%ರಷ್ಟು ಹೆಚ್ಚು ದರಗಳಾಗಿದ್ದು, ಕಾರ್ಯಪಾಲಕ ಅಭಿಯಂತರರುರವರ ಕಛೇರಿಯ ದರಸಂದಾನದ ನಂತರ ರೂ.9,17,88,115.88ಗಳು ಶೇ+4.90%ಹೆಚ್ಚುವರಿ ದರಗಳಿಗೆ ಕಾಮಗಾರಿ ನಿರ್ವಹಿಸುವುದಾಗಿ ಒಪ್ಪಿದ್ದು, ಸದರಿಯವರ ದರಗಳಿಗೆ ಅನುಮೋದನೆಗೆ ಘನ ಸರ್ಕಾರಕ್ಕೆ ಸಲ್ಲಿಸಲು ಸೂಕ್ತ ತೀರ್ಮಾನಕ್ಕಾಗಿ ಆರ್ಥಿಕ ಮೌಲ್ಯಮಾಪನ ಸಮಿತಿಯ ಮುಂದೆ ಮಂಡಿಸಲು ಆದೇಶಕ್ಕೆ ಕೋರಿದೆ.
39.	ಹೆಸ್ಕಾಂ ಸಿಬ್ಬಂದಿಗಳು)

ಪು.ತಿ.ನೋ

ಪುಟದ ಸಂಖ್ಯೆ 16

ಕಡತದ ಸಂಖ್ಯೆ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ :-

40) ಮೇಲಿನ ಕಂಡಿಕೆಗಳನ್ನು ಅವಗಾಹನೆಗೆ ತರುತ್ತಾ, ಕಾರ್ಯಪಾಲಕ ಅಭಿಯಂತರರು (ಯಲಹಂಕ) ಮತ್ತು ಮುಖ್ಯ ಅಭಿಯಂತರರು (ಯಲಹಂಕ) ವಲಯ ರವರು ಪ್ರಸ್ತಾಪಿತ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಿ ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾಗಿರುವ ಬಿಡುದಾರರ ಆರ್ಥಿಕ ಬಿಡ್‌ಅನ್ನು ಅನುಮೋದನೆಗೆ ಘನ ಸರ್ಕಾರಕ್ಕೆ ಸಲ್ಲಿಸಲು ಸೂಕ್ತ ತೀರ್ಮಾನ ಕೈಗೊಳ್ಳಲು ಆರ್ಥಿಕ ಮೌಲ್ಯಮಾಪನ ಸಮಿತಿಯ ಮುಂದೆ ಮಂಡಿಸಲು ಕೋರಿರುವ ಸಂಬಂಧ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

ಸಹಾಯಕ ಅಭಿಯಂತರರು 4/11/21

ತಾಂತ್ರಿಕ ಸಹಾಯಕರು V-S 4/11/21

ಪ್ರಧಾನ ಅಭಿಯಂತರರು)

ಕಂಡಿಕೆ (40) ರಲ್ಲಿನ ಅಂಶಕ್ಕೆ ಆದೇಶ ಕೋರಬಹುದಾಗಿದೆ.

ಪ್ರಧಾನ ಅಭಿಯಂತರರು 4/11/21.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

42) ವಲಯ ಆಯುಕ್ತರು (ಯಲಹಂಕ) 6/11/21

43) ಮಾನ್ಯ / ಮುಖ್ಯ / ಕಾರ್ಯನಿರ್ವಾಹಕ

06.11.2021

ಮುಖ್ಯ ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

44) CL (Ymk)

ಮುಖ್ಯ ಎಂಜಿನಿಯರ ವಲಯ

ಕಡತದ ಸಂಖ್ಯೆ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಲ್ಲಿಸಿದೆ:-

ದಿನಾಂಕ: 6-11-2021 ರಂದು ನಡೆದ ಆರ್ಥಿಕ ಮೌಲ್ಯಮಾಪನ / ದರ ಸಂಧಾನ ಸಮಿತಿಯ ತೀರ್ಮಾನದಂತೆ ಪ್ರಸ್ತಾಪಿತ ಕಾಮಗಾರಿಯ ಎಲ್-1 ಬಿಡ್ದುದಾರರ ಟೆಂಡರ್‌ಗೆ ಅನುಮೋದನೆ ಹಾಗೂ ಆಡಳಿತಾತ್ಮಕ ಅನುಮೋದನೆ ಪಡೆಯುವ ಸಂಬಂಧ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರಿಗೆ ಪತ್ರ ತಯಾರಿಸಿದ್ದು ಸಹಿಗಾಗಿ ಮಂಡಿಸಿದೆ.

ಮುಖ್ಯ ಅಭಿಯಂತರರು
ಯಲಹಂಕ ವಲಯ.
10/11

(45) ಮಾನ್ಯ ಮುಖ್ಯ ಆಯುಕ್ತರು

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(46) EE (yelahanka)

ಮಾನ್ಯ ಮುಖ್ಯಮಂತ್ರಿಗಳು 2020-21ನೇ ಸಾಲಿನ ರಾಜ್ಯ ಆಯವ್ಯಯ ಘೋಷಣೆಯ ಕಂಡಿಕೆ 205 ರಲ್ಲಿ ಘೋಷಿಸಿರುವಂತೆ ಬಿ.ಬಿ.ಎಂ.ಪಿ. ವ್ಯಾಪ್ತಿಯ 110 ಹಳ್ಳಿಗಳ ರಸ್ತೆಗಳನ್ನು ಸಮಗ್ರವಾಗಿ ಪುನಶ್ಚೇತನಗೊಳಿಸಲು ಸರ್ಕಾರದಿಂದ ಕ್ರಿಯಾ ಯೋಜನೆಯಲ್ಲಿ ಅನುಮೊದನೆಗೊಂಡಿರುವ ಕಾಮಗಾರಿಯಾದ "Restoration and Improvements of Balance roads of Brundhavana layout, Balaji layout, BHEL 1st phase and 2nd phase layout, Lakshmaiahreddy layout, Naidu layout, Jyothinagara 2nd and 3rd phase, Ramanna garden and surrounding areas in ward no -03 of Yelahanka New town Sub division (PACKAGE NO-07)" ಅಂದಾಜು ಮೊತ್ತ 1000.00 ಲಕ್ಷಗಳಿಗೆ ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ಮೌಲ್ಯಮಾಪನ ಹಾಗೂ ದರಸಂಧಾನ ಸಮಿತಿಯಲ್ಲಿ ನಿರ್ಣಯಿಸಿದಂತೆ ಸದರಿ ಕಾಮಗಾರಿಗೆ ಟೆಂಡರ್ ಅನುಮೋದನೆ ಹಾಗೂ ಆಡಳಿತಾತ್ಮಕ ಅನುಮೋದನೆ ನೀಡುವಂತೆ ದಿನಾಂಕ:10-11-2021 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಂತೆ ಸರ್ಕಾರದ ಆದೇಶ ಸಂಖ್ಯೆ:ನಅಇ **211** ಎಂ.ಎನ್.ವೈ **2021** ಬೆಂಗಳೂರು ದಿನಾಂಕ:10-02-2022 ರಂದು ಸರ್ಕಾರವು ರೂ. 8,83,75,593/- ((+)1.00%)ಗಳಿಗೆ ಟೆಂಡರ್ ಅನುಮೋದನೆ ನೀಡಿ ಹಾಗೂ ರೂ.1000.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ.